ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ಬೆಂಗಳೂರು
*****************************************************************************************
ಸಂಖ್ಯೆ: w-136/Committee/Proceding -29/2021-22 dt. 21-12-2021

# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ: 137

21-12-2021ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಂಖ್ಯೆ: 137 ರಾಯಪುರಂ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ಕಾಮಗಾರಿ) ವಸಂತನಗರ ಉಪ ವಿಭಾಗ ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 137 ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: 10-09-2020ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿಯ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು. ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಅಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಶ್ರೀ.ಮೊಹಮದ್ ಜಾವೀದ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಹಾಗೂ ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು

## ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೊಡಲಾಯಿತು.

ಈ ಬಗ್ಗೆ ಕೆಲಸ ಪರಿವೀಕ್ಷಕರು ದೂರು ಪುಸ್ತಕವನ್ನು ಮತ್ತು ಪರಿಹರಿಸಿದ ಬಗ್ಗೆ ಸಭೆಯಲ್ಲಿ ಪೂರ್ಣ ವಿವರ ನೀಡಿದರು.

ಸಭಾ ಸದಸ್ಯರು ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ ಸಭೆಯುಲ್ಲಿ ಪ್ರಸ್ತಾಪಿಸಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ರಸ್ತೆ ಗುಂಡಿಗಳನ್ನು ಗುರ್ತಿಸಿದ್ದು ಹಾಗೂ ಗುಂಡಿಗಳನ್ನು ಮುಚ್ಚಿರುವ ಬಗ್ಗೆ ಸಭೆಯಲ್ಲಿ ತಿಳಿಸುತ್ತಾ ಇನ್ನು ಕೆಲವು ರಸ್ತೆ ಗುಂಡಿಗಳನ್ನು 2021-22ನೇ ಸಾಲಿನ ಕಾರ್ಯಕ್ರಮಗಳ ಪಟ್ಟಿಯಲ್ಲಿ ವಾರ್ಡ್‌ಗಳಿಗೆ 20.00 ಲಕ್ಷವನ್ನು ಮೀಸಲಿರಿಸಿದ್ದು ರೂ. 20.00 ಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿದ್ದು ನಂತರದ ದಿನಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ಕಂದಾಯ ಪರಿವೀಕ್ಷಕರನ್ನು ವಾರ್ಡ್‌ವ್ಯಾಪ್ತಿಯಲ್ಲಿ ಕಂದಾಯ ವಸೂಲತಿಯ ಬಗ್ಗೆ ವಿವರಣೆ ಕೋರಿದರು.

ಸಂಬಂಧಿಸಿದ ಕಂದಾಯ ಅಧಿಕಾರಿಗಳು ಸಭೆಯಲ್ಲಿ ಮಾನ್ಯ ಆಯುಕ್ತರ ಅದೇಶದಂತೆ ದಿನಕ್ಕೆ 2.00 ಲಕ್ಷಗಳನ್ನು ವಸೂಲತಿ ಮಾಡುವಂತೆ ಆದೇಶಿಸಿದ್ದು ನಾವು ಪೂರ್ಣಪ್ರಮಾಣದಲ್ಲಿ ತೆರಿಗೆಯನ್ನು ಪಾವತಿಸಿಕೊಳ್ಳುತ್ತಿರುವುದಾಗಿ ಸಭೆಗೆ ತಿಳಿಸಿದರು ಹಾಗೂ ಮೈಸೂರು ರಸ್ತೆಯಲ್ಲಿ ಬರುವ ವಾಣಿಜ್ಯ ಕಟ್ಟಡಗಳಿಗೆ ನೋಟ್ಸ್ ನೀಡಿ ತೆರಿಗೆ ವಸೂಲತಿ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಕೋವಿಡ್-19 ಆರೋಗ್ಯ ಇಲಾಖೆಯವರಿಗೆ ಕೋವಿಡ್-19 ಇತ್ತಿಚೆಗೆ ಕೈಗೊಂಡ ಕ್ರಮಗಳ ಸಭೆಯಲ್ಲಿ ವಿವರಣೆ ಕೋರಿದರು

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿನಿಧಿಯು ಕೋವಿಡ್-19 ವಾರ್ಡ್ ವ್ಯಾಪ್ತಿಯಲ್ಲಿ ಅಗತ್ಯವಿದ್ದಲ್ಲಿ ಆರ್.ಟಿ.ಪಿ.ಸಿ. ಆರ್ ಮತ್ತು ಇತರೆ ಟೆಸ್ಟ್‌ಗಳನ್ನು ಕೈಗೊಂಡು ಓಮಿಕ್ರಾನ್ ವೈರಸ್ ಹರಡದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಮತ್ತು ವಿಲೇವರಿಯ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -137ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಮತ್ತು ವಾಹನಗಳು ಹಾಜರಾಗುತ್ತಿದ್ದು ಕೆಲವು ಆಟೋಗಳು ಗೈರಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸುತ್ತ ಗೈರಾದ ಆಟೋಗಳಿಗೆ ಬಿಲ್ಲಿನಲ್ಲಿ ಮೊತ್ತ ಕಟ್ಟಿವು ಮಾಡುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರು ವಾರ್ಡ್-137ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೇಸ್ಕಾಂಗೆ ಸಂಬಂಧಿಸಿದ ದೂರುಗಳು ಬಂದಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಾಂ) ರವರ ಪ್ರತಿನಿದಿಯು ಸದರಿ ವಿಷಯದ ಬಗ್ಗೆ ತುರ್ತು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಯ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರವನ್ನು ಸಭೆಯಲ್ಲಿ ತಿಳಿಸಿ, ದಿನಾಂಕ ನಿಗಧಿಪಡಿಸಿ ಕಾಮಗಾರಿಗಳ ಪರಿವೀಕ್ಷಣೆ ಮಾಡಲು ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 137ರ ವ್ಯಾಪ್ತಿಯಲ್ಲಿ ಮಾಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

ವಾರ್ಡ್-137ರ ಮಾಷಲ್ ಗಳು ಒಟ್ಟು ವಿಧಿಸಿದ ದಂಡ ರೂ. 5000 ಎಸ್ ಡಬ್ಲೂಎಂ. ದಂಡ ರೂ. 15,000 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

ಅಧ್ಯಕ್ಷರು ಡಬ್ಲೂಎಸ್‌ಎಸ್‌ಬಿ ಕಛೇರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್‌ಎಸ್‌ಬಿ ಅಧಿಕಾರಿಗಳು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್–137ರ ವ್ಯಾಪ್ತಿಯಲ್ಲಿ ಕೋವಿಡ್–19 ಕಾಯಿಲೆಯಿಂದ ಸತ್ತವರ ಪರಿಹಾರಕ್ಕಾಗಿ ಬಂದಿರುವಂತಹ ಅರ್ಜಿಗಳ ವಿವರವನ್ನು ಕೋರಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ರಾಯಪುರಂ ವ್ಯಾಪ್ತಿಯಲ್ಲಿ ಒಟ್ಟು 21 ಮೃತಪಟ್ಟಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಹಾಗೂ ಬಂದಂತಹ ಅರ್ಜಿಗಳನ್ನು ತುರ್ತಾಗಿ ವಿಲೇವಾರಿ ಮಾಡುತ್ತೀರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

<u>ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು</u>

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತನಗರ ಉಪ ವಿಭಾಗ) ಬಿ.ಬಿ.ಎಂ.ಪಿ, ದೂ. ಸಂಖ್ಯೆ: 9845720286 | ಅಧ್ಯಕ್ಷರು ಮತ್ತು ವಾರ್ಡ್‌ನ ನೋಡಲ್ ಅಧಿಕಾರಿ | |
| 2 | ಶ್ರೀ ಗಿರಿಧರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 137 ಬಿ.ಬಿ.ಎಂ.ಪಿ, ದೂ. ಸಂ 8618436036 | ಸದಸ್ಯ ಕಾರ್ಯದರ್ಶಿ | |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ –137 | ಸದಸ್ಯರು | |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ರವರ ಪ್ರತಿನಿಧಿ ಶ್ರೀ ಬಾಬು (ಕೆಲಸ ಪರಿವೀಕ್ಷಕರು) ವಾರ್ಡ್–137, ದೂ. 9342582372 | ಸದಸ್ಯರು | V. B... |

| | | | |
|---|---|---|---|
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ಬಸವಲಿಂಗಯ್ಯ ದೂ. 9686418488 | ಸದಸ್ಯರು | |
| 6 | ಶ್ರೀ ಸಿ. ಆರ್ ರವಿ ಪ್ರಸಾದ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845802912 | ಸದಸ್ಯರು | |
| 7 | ಶ್ರೀ ರಿಜ್ವಾನ್, ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845262860 | ಸದಸ್ಯರು | Rizwan |
| 8 | ಶ್ರೀ ರಾಜು, ದೂ.. 7676512877 ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. | ಸದಸ್ಯರು | |
| 9 | ಶ್ರೀಮತಿ ಆಶಾ. ದೂ. 9731317223 ಕಂದಾಯ ಪರಿವೀಕ್ಷಕರು | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ | ಸದಸ್ಯರು | |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ ಶ್ರೀ ಕುಮಾರ್ ಸ್ವಾಮಿ, ದೂ. 9060341644 | ಸದಸ್ಯರು | |
| 12 | ಸಹಾಯಕ ಕಾರ್ಯ ಪಾಲಕ ಅಭಿಯಂತರರು (ಬೆಸ್ಕಾಂ) ರವರ ಪ್ರತಿನಿಧಿ. ದೂ. 9449840364 | ಸದಸ್ಯರು | |

ಕಾರ್ಯದರ್ಶಿಗಳು
...ಯಕ ಅಭಿಯಂತರರು ವಾರ್ಡ್ ಸಂಖ್ಯೆ 137
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 137